ಕಂ/ಉಪಲೋಕ್/ಬಿಡಿ/730/2022
ಪಿ.ಎ.ಆರ್.ಇ-5

**ಕರ್ನಾಟಕ ಲೋಕಾಯುಕ್ತ**

**ಕಂಪ್ಲೆಂಟ್/ಉಪಲೋಕ್/ಬಿಡಿ/730/2022**
**ಪಿ.ಎ.ಆರ್.ಇ-05**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ ವೀಧಿ,
ಬೆಂಗಳೂರು_ದಿನಾಂಕ :05/09/2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ: ಪ್ರವೀಣ್ ಕೆ.ಎಸ್ ಬಿನ್ ಪರಮೇಶ್ವರ ಕೆ.ಎಸ್ ರೇಷ್ಮೆ ನಿರೀಕ್ಷಕರು, ರೇಷ್ಮೆ ಉಪ ನಿರ್ದೇಶಕರು ಕಛೇರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ, ನಿಯೋಜನೆ ತಾಂತ್ರಿಕ ಸೇವಾ ಕೇಂದ್ರ ಮೇಲೂರು, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ. ಇವರು ಸರ್ಕಾರಿ ಕರ್ತವ್ಯ** ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

******

1. ಆರಕ್ಷಕ ನಿರೀಕ್ಷಕರು, ಭ್ರಷ್ಟಚಾರ ನಿಗ್ರಹ ದಳ ಪೋಲಿಸ್ ಠಾಣೆ, ಚಿಕ್ಕಬಳ್ಳಾಪುರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಶ್ರೀ ಪ್ರವೀಣ್ ಕೆ.ಎಸ್, ಬಿನ್ ಪರಮೇಶ್ವರ ಕೆ.ಎಸ್, ರೇಷ್ಮೆ ನಿರೀಕ್ಷಕರು, ರೇಷ್ಮೆ ಉಪ ನಿರ್ದೇಶಕರು ಕಛೇರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ, ನಿಯೋಜನೆ ತಾಂತ್ರಿಕ ಸೇವಾ ಕೇಂದ್ರ ಮೇಲೂರು, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ.** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಶ್ರೀ ಬಿ.ಎಂ ಶ್ರೀನಿವಾಸರೆಡ್ಡಿ, ಬಿನ್ ಬಿ.ಎನ್. ಚಿಕ್ಕಮುನಿಶಾಮಯ್ಯ, ಮೇಲೂರು ಗ್ರಾಮ, ಶಿಡ್ಲಘಟ್ಟ ತಾಲ್ಲೂಕು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ದೂರುದಾರರು ಹನುಮೇನಹಳ್ಳಿ ಗ್ರಾಮದ ಸರ್ವೇ ನಂ. 10/3 ರಲ್ಲಿ 31 ಗುಂಟೆ ಜಮೀನನಲ್ಲಿ 16*56 ಅಡಿ ರೇಷ್ಮೆ ಹುಳು ಸಾಕಾಣಿಕೆ ಮನೆಯನ್ನು ನಿರ್ಮಾಣ ಮಾಡಿದ್ದು ಅದಕ್ಕೆ ಸಂಬಂಧಿಸಿದಂತೆ ರೂ. 2,25,000/- ಸಹಾಯ ಧನ ಮಂಜೂರು ಮಾಡಲು ಇಗ್ಗೆ ಒಂದು ವರ್ಷದ ಹಿಂದೆ ರೂ. 25,000/- ಬೇಡಿಕೆ ಇಟ್ಟು ರೂ. 15,000/- ಲಂಚ ಪಡೆದು ಕೊಂಡು ನಂತರ ಸಹಾಯ ಧನವನ್ನು ಮಂಜೂರು ಮಾಡಿರುತ್ತಾರೆ. ಇಗ್ಗೆ ಆರು ತಿಂಗಳ ಹಿಂದೆ ಎದುರುದಾರರು ಹನಿ ನೀರಾವರಿ ಅಳವಡಿಸಿಕೊಂಡಿದ್ದು ಅದಕ್ಕೆ ಸಂಬಂಧಿಸಿದಂತೆ ದಿನಾಂಕ 5/10/2020 ರಂದು ಎದುರುದಾರರನ್ನು ಕಛೇರಿಯಲ್ಲಿ ಭೇಟಿ ಮಾಡಿ ಹನಿ ನೀರಾವರಿ ಸಹಾಯ ಧನ ಮಂಜೂರು ಮಾಡಲು ಕೇಳಿದಾಗ ಎದುರುದಾರರು ರೇಷ್ಮೆ ಹುಳು ಸಾಕಾಣಿಕೆ ಮನೆಯ ಬಾಕಿ ರೂ. 10,000/- ಲಂಚವನ್ನು ಕೇಳಿ ರೂ. 5000/- ನೀಡಿದ ನಂತರ ಹನಿ ನೀರಾವರಿ ಸಹಾಯ ಧನದ ಬಿಲ್ಲ ತಯಾರಿಸಲು ರೂ. 5,000/- ಹಾಗೂ ಸಹಾಯ ಧನ ಮಂಜೂರು ಮಾಡಿಕೊಡಲು ರೂ. 2,500/- ಹಾಗೂ ರೇಷ್ಮೆ ಸಾಕಣಿಕೆ ಮನೆ ಬಾಬ್ತು ಕೊಡಬೇಕಾದ ಬಾಕಿ ಲಂಚದ ಹಣ ರೂ. 5000/- ಹೀಗೆ ಒಟ್ಟು ರೂ. 12,500/- ಲಂಚಕ್ಕೆ

ಬೇಡಿಕೆ ಇಟ್ಟ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ದಿ: 13/10/2020 ರಂದು ಚಿಕ್ಕಬಳ್ಳಾಪುರ ಎಸಿಬಿ ಪೋಲಿಸ್ ಠಾಣಾ ಗುನ್ನಾ ನಂ. 08/2020 ರಲ್ಲಿ ದಾಖಲಾಗಿದ್ದು ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7(a) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ಸಾರ್ವಜನಿಕ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ರೂ. 12,500/– ಲಂಚ ಪಡೆದುಕೊಂಡು ರೆಡ್ ಹ್ಯಾಂಡ್ ಆಗಿ ಸಿಕ್ಕಿ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i) ದೂರುದಾರರಾದ **ಶ್ರೀ ಬಿ.ಎಂ ಶ್ರೀನಿವಾಸರೆಡ್ಡಿ, ಬಿನ್ ಬಿ.ಎನ್. ಚಿಕ್ಕಮುನಿ ಶಾಮಯ್ಯ, ಮೇಲೂರು ಗ್ರಾಮ, ಶಿಡ್ಲಘಟ್ಟ ತಾಲ್ಲೂಕು** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ದೂರುದಾರರು ಹನುಮೇನಹಳ್ಳಿ ಗ್ರಾಮದ ಸರ್ವೇ ನಂ. 10/3 ರಲ್ಲಿ 31 ಗುಂಟೆ ಜಮೀನನಲ್ಲಿ 16*56 ಅಡಿ ರೇಷ್ಮೆ ಹುಳು ಸಾಕಾಣಿಕ ಮನೆಯನ್ನು ನಿರ್ಮಾಣ ಮಾಡಿದ್ದು ಅದಕ್ಕೆ ಸಂಬಂಧಿಸಿದಂತೆ ರೂ. 2,25,000/– ಸಹಾಯ ಧನ ಮಂಜೂರು ಮಾಡಲು ಇಗ್ಗೆ ಒಂದು ವರ್ಷದ ಹಿಂದೆ ರೂ. 25,000/– ಬೇಡಿಕೆ ಇಟ್ಟು ರೂ. 15,000/– ಲಂಚ ಪಡೆದು ಕೊಂಡ ನಂತರ ಸಹಾಯ ಧನವನ್ನು ಮಂಜೂರು ಮಾಡಿರುತ್ತಾರೆ. ಇಗ್ಗೆ ಆರು ತಿಂಗಳ ಹಿಂದೆ ಎದುರುದಾರರು ಹನಿ ನೀರಾವರಿ ಅಳವಡಿಸಿಕೊಂಡಿದ್ದು ಅದಕ್ಕೆ ಸಂಬಂಧಿಸಿದಂತೆ ದಿನಾಂಕ:05/10/2020 ರಂದು ಎದುರುದಾರರನ್ನು ಕಛೇರಿಯಲ್ಲಿ ಭೇಟಿ ಮಾಡಿ ಹನಿ ನೀರಾವರಿ ಸಹಾಯ ಧನ ಮಂಜೂರು ಮಾಡಲು ಕೇಳಿದಾಗ ಎದುರುದಾರರು ರೇಷ್ಮೆ ಹುಳು ಸಾಕಾಣಿಕೆ ಮನೆಯ ಬಾಕಿ ರೂ. 10,000/– ಲಂಚವನ್ನು ಕೇಳಿ ರೂ. 5000/– ನೀಡಿದ ನಂತರ ಹನಿ ನೀರಾವರಿ ಸಹಾಯ ಧನದ ಬಿಲ್ಲ ತಯಾರಿಸಲು ರೂ. 5,000/– ಹಾಗೂ ಸಹಾಯ ಧನ ಮಂಜೂರು ಮಾಡಿಕೊಡಲು ರೂ. 2,500/– ಹಾಗೂ ರೇಷ್ಮೆ ಸಾಕಣಿಕೆ ಮನೆ ಬಾಬ್ತು ಕೊಡಬೇಕಾದ ಬಾಕಿ ಲಂಚದ ಹಣ ರೂ. 5000/– ಹೀಗೆ ಒಟ್ಟು ರೂ. 12,500/– ಲಂಚಕ್ಕೆ ಬೇಡಿಕೆ ಇಟ್ಟಿದ್ದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ:13/10/2020 ರಂದು ಚಿಕ್ಕಬಳ್ಳಾಪುರ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.08/2020 ರಲ್ಲಿ, ಭ್ರಷ್ಟಾಚಾರ ನಿಗ್ರಹ ಕಾಯ್ದೆ ಕಲಂ 7(a) ಅಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಎ. ಶಿವಕುಮಾರ್ (ನೆರಳುಸಾಕ್ಷಿ)

2) ಮಂಜುನಾಥ ಪಿ.ವಿ ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳಸಮಕ್ಷಮ ಲಂಚ ನೀಡಲು ತಂದ ರೂ. 12,500/- (500X1) (2000X6) ಗಳನ್ನು ಹಾಗೂ ಮೊಬೈಲ್‌ನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಮೊಬೈಲ್‌ನಲ್ಲಿ ರೆಕಾರ್ಡ ಆಗಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಲಿಪಿಕರಿಸಿ ಸಿಡಿಗೆ ವರ್ಗಾಹಿಸಿಕೊಂಡಿರುತ್ತಾರೆ. ದೂರುದಾರರು ಹಾಜರುಪಡಿಸಿದ ನೋಟುಗಳ ನಂಬರುಗಳನ್ನು ಪಂಚರು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ಪೋಲಿಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-1 ಎ. ಶಿವಕುಮಾರ್ ಇವರ ಮೂಲಕ ದೂರುದಾರರ ಪ್ಯಾಂಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಪಂಚ-1 ಇವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಎ. ಶಿವಕುಮಾರ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ತಲೆ ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ ಮಾಡಿಕೊಳ್ಳಲು ದೂರುದಾರರಿಗೆ ವಾಯ್ಸ್ ರೆಕಾರ್ಡರ್ ನೀಡಿರುತ್ತಾರೆ, ಈ ಎಲ್ಲಾ ಘಟನಾವಳಿಗಳನ್ನು ದಿ: 13-10-2020 ರಂದು ಬೆಳಿಗ್ಗೆ 11.45 ರಿಂದ ಮಧ್ಯಾಹ್ನ 2.00 ಘಂಟೆಯವರೆಗೆ ಚಿಕ್ಕಬಳ್ಳಾಪುರ, ಎಸಿಬಿ ಪೊಲೀಸ್ ಠಾಣೆಯಲ್ಲಿ ಬರೆದ ಪ್ರಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿತಂಡದವರು ಪೊಲೀಸ್ ಠಾಣೆಯನ್ನು 2.55 ಕ್ಕೆ ಬಿಟ್ಟು, ಹಂಡಿಗನಾಳ ಗ್ರಾಮದ ಬಳಿ ವಾಹನವನ್ನು ನಿಲ್ಲಿಸಿ ಎದುರುದಾರರಿಗೆ ಫೋನ್ ಮಾಡಲಾಗಿ ತಾನು ಕಛೇರಿಯಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಶಿಡ್ಲಘಟ್ಟ-ಬೆಂಗಳೂರು ರಸ್ತೆಯಲ್ಲಿರುವ ಚೌಡಸಂದ್ರ ಗೇಟ್ ಬಳಿ ವಾಹನಗಳನ್ನು ನಿಲ್ಲಿಸಿ ದೂರುದಾರರನ್ನು ಹಾಗೂ ನೆರಳು ಸಾಕ್ಷಿಯನ್ನು ಮೇಲೂರು ತಾಂತ್ರಿಕ ಸೇವಾ ಕೇಂದ್ರದ ಒಳಗಡೆ ಕಳುಹಿಸಿ, ದಾಳಿತಂಡದವರು ದೂರುದಾರರನ್ನು

ಹಿಂಬಾಲಿಸಿ ಸೇವಾ ಕೇಂದ್ರದ ಮರಗಳ ಮರೆಯಲ್ಲಿ ಗುಪ್ತವಾಗಿ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ. ಎದುರುದಾರರು ಸೇವಾ ಕೇಂದ್ರದಲ್ಲಿ ಹಾಜರಿದ್ದು, ಎದುರುದಾರರು ಕಛೇರಿಯ ಹಿಂಭಾಗಕ್ಕೆ ದೂರುದಾರರೊಂದಿಗೆ ಬಂದು, ಹಣವನ್ನು ತಂದಿದ್ದಿಯಾ ಎಂದು ಕೈ ಸಹ್ನೆ ಮೂಲಕ ಕೇಳಿ, ದೂರುದಾರರಿಂದ ಹಣವನ್ನು ಪಡೆದುಕೊಂಡು ಎರಡು ಕೈಗಳಿಂದ ಏಣಿಸಿ, ತಮ್ಮ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಇದನ್ನು ನೆರಳುಸಾಕ್ಷಿಯು ದೂರದಲ್ಲಿ ನಿಂತು ವೀಕ್ಷಿಸಿರುತ್ತಾರೆ. ಎದುರುದಾರರು ಹಣ ಪಡೆದುಕೊಂಡ ನಂತರ ದೂರುದಾರರು ದಾಳಿತಂಡದವರಿಗೆ ಸಂಜ್ಞೆ ನೀಡಿರುತ್ತಾರೆ. ತಕ್ಷಣ ದಾಳಿತಂಡದವರು ದೂರುದಾರರ ಹತ್ತಿರ ಬಂದು, ದೂರುದಾರರನ್ನು ವಿಚಾರಿಸಲಾಗಿ, ಎದುರುದಾರರನ್ನು ತೋರಿಸಿ, ಇವರೇ ತನ್ನಿಂದ ರೂ.12,500/- ಹಣವನ್ನು ಕೈ ಸಹ್ನೆ ಮೂಲಕ ಕೇಳಿ ಪಡೆದುಕೊಂಡು ಎರಡು ಕೈಗಳಿಂದ ಏಣಿಸಿ, ತಮ್ಮ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ನುಡಿದಿರುತ್ತಾರೆ. ಅದೇ ಪ್ರಕಾರ ನೆರಳುಸಾಕ್ಷಿ ಕೂಡ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ತಮ್ಮ ಪರಿಚಯ ಮಾಡಿಕೊಂಡು ಪ್ರಕರಣ ದಾಖಲಾದ ಬಗ್ಗೆ ತಿಳಿಸಿ, ತನಿಖೆಗೆ ಸಹಕರಿಸಲು ಸೂಚಿಸಿರುತ್ತಾರೆ. ಸ್ಥಳದಲ್ಲಿ ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಎದುರುದಾರರ ಎರಡು ಕೈ ಬೆರಳುಗಳನ್ನು ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ದೂರುದಾರರ ಎರಡು ಕೈಗಳನ್ನು ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ-1 ರವರು ಎದುರುದಾರರ ಪ್ಯಾಂಟ್ ಜೇಬಿನಿಂದ ಹಣವನ್ನು ತೆಗೆದು ಹಾಜರುಪಡಿಸಿದ್ದು, ಸದರಿ ಹಣವನ್ನು ಪಂಚರು ಈ ಮೊದಲೇ ದಾಖಲಿಸಿಕೊಂಡ ನೋಟುಗಳ ನಂಬರ್‌ಗಳೊಂದಿಗೆ ತಾಳೆ ಮಾಡಿ ನೋಡಲಾಗಿ, ತಾಳೆ ಹೊಂದಿದ ಮೇರೆಗೆ ಸದರಿ ಹಣವನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ಕಡತದ ಬಗ್ಗೆ ಕೇಳಲಾಗಿ ಎದುರುದಾರರು ತಮ್ಮ ಟೇಬಲ್ ಮೇಲೆ ಇದ್ದ ಕಡತವನ್ನು ಹಾಜರುಪಡಿಸಿರುತ್ತಾರೆ. ಹಣ ಸ್ವೀಕರಿಸಿದ ಸ್ಥಳವು ಮೇಲೂರು ತಾಂತ್ರಿಕ ಸೇವಾ ಕೇಂದ್ರವಾಗಿದ್ದರಿಂದ, ಕೋರೋನಾ ಖಾಯಿಲೆಯ ಹಿನ್ನೆಲೆಯಲ್ಲಿ ಶಿಡ್ಲಘಟ್ಟ ಸಹಾಯಕ ನಿರ್ದೇಶಕರ ಕಛೇರಿಗೆ ಬಂದು ಹಿರಿಯ ಅಧಿಕಾರಿ ರಾಮಕೃಷ್ಣಪ್ಪ ಇವರನ್ನು ವಾಹನದಲ್ಲಿ ಕರೆದುಕೊಂಡು ಚಿಕ್ಕಬಳ್ಳಾಪುರ ಎಸಿಬಿ ಕಛೇರಿಗೆ ಬಂದಿರುತ್ತಾರೆ. ಎದುರುದಾರರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ, ಪ್ಯಾಂಟಿನ ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳು ಪ್ಯಾಂಟ್‌ನ್ನು ಸಹ

ವಶಪಡಿಸಿಕೊಂಡಿರುತ್ತಾರೆ. ಟ್ರ್ಯಾಪ್ ಸಮಯದಲ್ಲಿ ನಡೆದ ಸಂಭಾಷಣೆಯನ್ನು ಲಿಪಿಕರಿಸಿ ಸಿಡಿಗಳಿಗೆ ವರ್ಗಾಯಿಸಿಕೊಂಡಿರುತ್ತಾರೆ. ಎದುರುದಾರರು ಹಾಜರುಪಡಿಸಿದ ಎರಡು ಕಡತಗಳ ಜೆರಾಕ್ಸ್ ಪ್ರತಿ ತಯಾರಿಸಿ ಅದನ್ನು ರಾಮಕೃಷ್ಣಪ್ಪ ಇವರಿಂದ ದೃಢಿಕರಿಸಿಕೊಂಡು ವಶಪಡಿಸಿಕೊಂಡಿರುತ್ತಾರೆ. ಲಂಚ ಬೇಡಿಕೆಯ ಸಂಭಾಷಣೆಯನ್ನು ಹಿರಿಯ ಅಧಿಕಾರಿಗೆ ಕೇಳಿಸಲಾಗಿ ಅದರಲ್ಲಿದ್ದ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ. ಎದುರುದಾರರ ಲಂಚ ಬೇಡಿಕೆಯ ಸಂಭಾಷಣೆಯ ಭಾಗವನ್ನು ಬೆರಳಚ್ಚು ಮಾಡಿಸಿ ಅದನ್ನು ಎದುರುದಾರರಿಂದ ಮೂರು ಸಲ ಓದಿಸಿ ಸಿಡಿಯಲ್ಲಿ ರೆರ್ಕಾಡ್ ಮಾಡಿಕೊಳ್ಳುವ ಮೂಲಕ ಎದುರುದಾರರ ಮಾದರಿ ಧ್ವನಿಯನ್ನು ರೆರ್ಕಾಡ್ ಮಾಡಿಕೊಂಡಿರುತ್ತಾರೆ. ಎದುರುದಾರರಿಗೆ ಸಮಜಾಯಿಷಿಯನ್ನು ಬರೆದುಕೊಡಲು ತಿಳಿಸಿದ್ದು, ಸದರಿಯವರು ತಮ್ಮ ಸಮಾಜಾಯಿಷಿಯಲ್ಲಿ ಬರೆದುಕೊಟ್ಟಿದೇನೆಂದರೆ ದೂರುದಾರರು ದಿನಾಂಕ 5/10/2020 ರಂದು ನಮ್ಮ ಕಛೇರಿಗೆ ಬಂದು ಹನಿ ನೀರಾವರಿಗೆ ಸಂಬಂಧಿಸಿದಂತೆ ಖರ್ಚು ವೆಚ್ಚದ ಹಣವನ್ನು ಕೊಡುತ್ತೇನೆಂದು ಹೇಳಿರುತ್ತಾರೆ. ನಮ್ಮ ಕಛೇರಿಯಲ್ಲಿ ಯಾವುದೇ ರೈತರಿಂದ ಹಣ ಪಡೆಯುವುದಿಲ್ಲವೆಂದು ತಿಳಿಸಿರುತ್ತೇನೆ. ಸಹಾಯಧನವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಈ ದಿನ ಅಂದರೆ ದಿನಾಂಕ 13/10/2020 ರಂದು ಸೇವಾ ಕೇಂದ್ರಕ್ಕೆ ಬಂದು ತನ್ನ ಹತ್ತಿರ ಮಾತನಾಡಬೇಕೆಂದು ಕಛೇರಿಯಿಂದ ನನ್ನನ್ನು ಹೊರಗೆ ಕರೆದು ಬಲವಂತವಾಗಿ ಹಣವನ್ನು ಜೇಬಿನಲ್ಲಿ ಇಟ್ಟಿರುತ್ತಾರೆ. ಬೇಡ ಎಂದು ಹೇಳಿದರೂ ಬಲವಂತವಾಗಿ ಹಣವನ್ನು ಜೇಬಿನಲ್ಲಿ ಇಟ್ಟಿರುತ್ತಾರೆ. ಅಷ್ಟರಲ್ಲಿ ಎಸಿಬಿ ಪೋಲೀಸರು ಬಂದು ನನ್ನನ್ನು ವಶಕ್ಕೆ ಪಡೆದಿರುತ್ತಾರೆ. ದೂರು ಸುಳ್ಳಿನಿಂದ ಕೂಡಿರುತ್ತದೆ ಎಂದು ಬರೆದುಕೊಟ್ಟಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 13/10/2020 ರಂದು ಮಧ್ಯಾಹ್ನ 3.45 ರಿಂದ ರಾತ್ರಿ 9.00 ಗಂಟೆರವರೆಗೆ ಚಿಕ್ಕಬಳ್ಳಾಪುರ ಎಸಿಬಿ ಠಾಣೆಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದುರುದಾರರ ಎರಡು ಕೈ ಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದಾಗಿ ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಎದುರುದಾರರ ಹಿರಿಯ ಅಧಿಕಾರಿ ಹೆಚ್. ರಾಮಕೃಷ್ಣಪ್ಪ ಇವರು ಲಂಚ ಬೇಡಿಕೆಯ ಸಂಭಾಷಣೆಯಲ್ಲಿಯ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ.

v) ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಲಯದ ಮುಂದೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಅಭಿಯೋಜನೆಗೊಳಿಸಲು ಸದರಿಯವರನ್ನು ಸೇವೆಯಿಂದ ವಜಾಗೊಳಿಸಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಅಭಿಯೋಜನಾ ಮಂಜೂರಾತಿ ಆದೇಶವನ್ನು ಪಡೆದುಕೊಂಡಿರುತ್ತಾರೆ.

3. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಪತ್ರ ದಿನಾಂಕ: 16-05-2022 ರಂತೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಪರಿವೀಕ್ಷಣಾ ಟಿಪ್ಪಣಿಯಲ್ಲಿ ಮಾಡಿದ ಎಲ್ಲಾ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ದೂರುದಾರರು ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ. ಪ್ರಾಥಮಿಕ ವಿಚಾರಣೆ ಮಾಡದೆ ಎಫ್.ಐ.ಆರ್ ಅನ್ನು ದಾಖಲಿಸಿಲಾಗಿದೆ. ಹಣಕ್ಕೆ ಫಿನಾಫ್ತಲಿನ್ ಸವರುವುದು ಮತ್ತು ಮೆಮೊರಿ ಕಾರ್ಡ್‌ನಲ್ಲಿದ್ದ ಸಂಭಾಷಣೆಯನ್ನು ಸಿ.ಡಿಗೆ ವರ್ಗಾಯಿಸುವ ಪ್ರಕ್ರಿಯೆಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಟ್ರ್ಯಾಪ್ ಪೂರ್ವದ ಮಹಜರ್‌ನಲ್ಲಿ ಬರೆದುಕೊಂಡಿರುತ್ತಾರೆ. ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತನ್ನ ಕೈ ತೊಳೆದಾಗ ಗುಲಾಬಿ ಬಣ್ಣಕ್ಕೆ ತಿರುಗಿರುವುದನ್ನು ಅಲ್ಲಗಳೆದಿರುತ್ತಾರೆ. ತಾನು ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ. ಕಾನೂನು ಪ್ರಕಾರ ಕೆಮಿಕಲ್ ಟೆಸ್ಟ್ ಮತ್ತು ಧ್ವನಿ ಟೆಸ್ಟ್ ಅನ್ನು ಮಾಡಿರುವುದಿಲ್ಲ. ಮಾದರಿ ಧ್ವನಿಯು ತನ್ನದಾಗಿರುವುದಿಲ್ಲ. ಹಣಕ್ಕೆ ಆಸೆ ಪಟ್ಟು ಕಛೇರಿ ಕೆಲಸದಲ್ಲಿ ವಿಳಂಬ ತೋರಿಸಿರುವುದಿಲ್ಲ. ದಾಳಿ ತಂಡದವರು ದಾಳಿ ಕಾಲಕ್ಕೆ ನನ್ನ ಸಮಜಾಯಿಷಿಯನ್ನು ಪರಿಗಣಿಸಿರುವುದಿಲ್ಲ. ನನ್ನ ಗೌರವಕ್ಕೆ ದಕ್ಕೆ ತರುವ ಉದ್ದೇಶದಿಂದ ಸುಳ್ಳು ದೂರು ದಾಖಲಿಸಲಾಗಿದೆ. ತಾನು ಕರ್ತವ್ಯಲೋಪ ಎಸಗಿರುವುದಿಲ್ಲ. ಆದ್ದರಿಂದ ತನ್ನನ್ನು ವಿಚಾರಣೆಯಿಂದ ಕೈ ಬಿಡಬೇಕೆಂದು ನಿವೇದಿಸಿಕೊಂಡಿರುತ್ತಾರೆ.

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಭರಿಸಲಾಗಿ, ಎದುರುದಾರರು ಮೇಲ್ಕಂಡಂತೆ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ನಂಬಲು ಈ ಹಂತದಲ್ಲಿ ಬಲವಾದ ಹಾಗೂ ಸಮಂಜಸವಾದ ಆಧಾರಗಳು ಇರುವುದಿಲ್ಲ. ಎದುರುದಾರರು ಸಲ್ಲಿಸಿದ ಸಮಜಾಯಿಷಿಯು ತೃಪ್ತಿಕರವಾಗಿರುವುದಿಲ್ಲ. ಇಲಾಖಾ ವಿಚಾರಣೆ ನಡೆದಲ್ಲಿ ಆಪಾದನೆಗಳ ಸತ್ಯಾಸತ್ಯಾತೆಯನ್ನು ಕಂಡುಕೊಳ್ಳಬಹುದಾಗಿದೆ. ಆದ್ದರಿಂದ ಎದುರುದಾರರು ಇಲಾಖಾ ವಿಚಾರಣೆಗೆ ಒಳಪಡಲು ಭಾದ್ಯರಾಗಿರುತ್ತಾರೆ.

ಕಂ/ಉಪಲೋಕ್/ಬಿಡಿ/730/2022
ಪಿ.ಓ.ಎ.ಆರ್.ಇ-5

5. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ದೆಯನ್ನು ಹೊಂದಿರದೇ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕೆ.ಸಿ.ಎಸ್.ಆರ್ (ನಡತೆ) ನಿಯಮ 1966 ನಿಯಮ 3 1 (i) to (iv) ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

6. ಆದ್ದರಿಂದ ಎದುರುದಾರರ **ಶ್ರೀ ಪ್ರವೀಣ್ ಕೆ.ಎಸ್, ಬಿನ್ ಪರಮೇಶ್ವರ ಕೆ.ಎಸ್, ರೇಷ್ಮೆ ನಿರೀಕ್ಷಕರು, ರೇಷ್ಮೆ ಉಪ ನಿರ್ದೇಶಕರು ಕಛೇರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ, ನಿಯೋಜನೆ ತಾಂತ್ರಿಕ ಸೇವಾ ಕೇಂದ್ರ, ಮೇಲೂರು, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ವಯೋ ನಿವೃತ್ತಿ ದಿನಾಂಕ:24/01/2036** ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅನ್ವಯ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

05/9/22

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**